

# ಕೊಳೆಗೇರಿ ಹಳ್ಳಿಗಳು ಕಾಮನಬಿಲ್ಲುಗಳಾದಾಗ...

ಇಂಡೋನೇಷ್ಯಾದ ಕೆಲವು 'ಕಲರ್‌ಫುಲ್' ಹಳ್ಳಿಗಳು ಕಾಮನಬಿಲ್ಲನ್ನು ನೆನಪಿಸುತ್ತದೆ. ಇಲ್ಲಿನ ಕೊಳೆಗೇರಿಗಳೆಲ್ಲ ರೈನ್‌ಬೊ ಬಣ್ಣಗಳನ್ನು ಅಲಂಕರಿಸಿದ್ದಷ್ಟೇ ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲೂ ಟ್ರೆಂಡ್ ಆಗಿವೆ. ವಿಶ್ವದ ಕೊಳೆಗೇರಿಗಳಿಗೆಲ್ಲ ಈ ಹಳ್ಳಿಗಳು ಮಾದರಿಯಾಗಿ ನಿಂತಿವೆ.

■ ಸುಮಾ ಬಿ.

ರೈನ್‌ಬೊ ಎಂದೊಡನೆ ಆಕಾಶದಲ್ಲಿ ಮೂಡುವ ಏಳು ಬಣ್ಣಗಳ ಕಮಾನು ಮನದ ಚಿತ್ರಪಟದಲ್ಲಿ ಸುಳಿದಾಡುತ್ತದೆ. ಆದರೆ, ಇಂಡೊನೇಷ್ಯಾಕ್ಕೆ ಬಂದರೆ ಕಾಮನಬಿಲ್ಲಿನ ಪರಿಕಲ್ಪನೆಯೇ ಬದಲಾಗಿದೆ ಎಂದೆನಿಸುತ್ತದೆ. ಇಲ್ಲಿನ ಕೆಲ ಕೊಳೆಗೇರಿಗಳನ್ನು ರೈನ್‌ಬೊ ಬಣ್ಣಗಳು ಅಲಂಕರಿಸಿವೆ. ಆ ಬಣ್ಣಗಳಿಂದಲೇ ಈಗ 'ಕಾಮ್‌ಪುಂಗ್ ಪೆಳಂಗಿ' ಎಂಬ ಪುಟ್ಟ ಹಳ್ಳಿ ವಿಶ್ವದ ಗಮನ ಸೆಳೆಯುತ್ತಿದೆ!

ಇಡೀ ಹಳ್ಳಿಯ ಮನೆಗಳು, ರಸ್ತೆಗಳು, ಚರಂಡಿ, ಮೆಟ್ಟಿಲು, ಆಟದ ಮೈದಾನ, ಹೂವಿನ ಕುಂಡಗಳು ಎಲ್ಲವನ್ನೂ ಬಣ್ಣಗಳು ಆವರಿಸಿವೆ. ಅಷ್ಟೇ ಅಲ್ಲ ಮನೆಗಳ ಗೋಡೆಗಳ ಮೇಲೆ ದೇಸಿ ಸಂಸ್ಕೃತಿ ಬಿಂಬಿಸುವ ಚಿತ್ರಪಟಗಳು, ಕಲಾಕೃತಿಗಳು, ಅಲಂಕಾರಿಕವಾಗಿ ಹೊಂದಿಸಿರುವ ಛತ್ರಿಗಳು ಪ್ರವಾಸಿಗರನ್ನು ಕೈಬೀಸುತ್ತಿವೆ. ಕೆಲ ಮನೆಗಳ ಗೋಡೆಗಳ ಮೇಲೆ 3ಡಿ ಕಲಾಕೃತಿಗಳೂ ಪಡಿಮೂಡಿವೆ. ಸ್ಥಳೀಯ ಕಲಾವಿದರ ಕೈಚಳಕವೂ ಇಲ್ಲಿ ಮೈದುಂಬಿದೆ.

ಸಮರಂಗ್ ನಗರದ ಸಮೀಪವಿರುವ ಜಕಾರ್ತದಿಂದ 450 ಕಿ.ಮೀ ದೂರದಲ್ಲಿರುವ ದ್ವೀಪದಂತಿದ್ದ ಟೆಟ್ರೆವ್ (ಹಳ್ಳಿಯ ಮೊದಲ ಹೆಸರು) ಹಳ್ಳಿ ಎರಡು ವರ್ಷಗಳ ಹಿಂದಿನವರೆಗೂ ಕೊಳೆಯನ್ನೇ ಹೊರಸೂಸುವ ಕೊಳೆಗೇರಿ ಎಂಬ ಕುಖ್ಯಾತಿಗೆ ಒಳಗಾಗಿತ್ತು. ಈಗ ಬಣ್ಣಗಳೊಂದಿಗಿನ ನಂಟು ಕಾಮ್‌ಪುಂಗ್ ಪೆಳಂಗಿಯಾಗಿ (ಬೈನ್‌ಬೊ ವಿಲೇಜ್) ಬದಲಾಯಿಸಿದೆ.

ಇಂಡೊನೇಷ್ಯಾದ ಪೂರ್ವ ಭಾಗದಲ್ಲಿರುವ ಈ ಹಳ್ಳಿ ನಾಲ್ಕು ತಿಂಗಳ ಅವಧಿಯಲ್ಲಿ ತನ್ನ ಚಿತ್ರಣವನ್ನೇ ಬದಲಾಯಿಸಿಕೊಂಡಿತು. ಹಳ್ಳಿಯ ಒಳಹೊಕ್ಕರೆ ಬಣ್ಣದ ಪಾಠಶಾಲೆಗೆ ಭೇಟಿಕೊಟ್ಟ ಅನುಭೂತಿ ಮೂಡುತ್ತದೆ. ಎತ್ತ ನೋಡಿದರೂ ಬಣ್ಣಗಳೇ ಮೇಳೈಸಿವೆ. ಆಕಾಶವನ್ನೂ ನಾಚಿಸುವಂತೆ ಈ ಹಳ್ಳಿ ರೂಪುಗೊಂಡಿದೆ. ಹೀಗೆ ಬಣ್ಣ ಬಳಿದುಕೊಂಡು ಮದುವಣಗಿತ್ತಿಯಂತೆ ಶೃಂಗಾರಗೊಳ್ಳುವುದರ ಹಿಂದೆ ಶಾಲೆಯೊಂದರ ಶಿಕ್ಷಕ ಸ್ಲಮೆಟ್ ವಿಡೊಡೊ ಅವರ ಇಚ್ಛಾಶಕ್ತಿ ಕೆಲಸ ಮಾಡಿದೆ.

ತನ್ನದೇ ಜನಾಂಗದ ಕೊಳೆಗೇರಿ ಜನರ